337 (651) ಶ್ರೀ ದಿನೇಶ್ ಗುಂಡೂರಾವ್, (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮೂಲ ಆಸರೆಯಾಗಿರುವ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ರೀತಿ ಅಂತರ್ಜಲ ಮಟ್ಟ ಕುಸಿತದಿಂದ ಕುಡಿಯುವ ನೀರಿಗೆ ತೊಂದರೆಯಾಗಿರುವುದು ನಿಜವಲ್ಲವೆ,

ಇ) ಅಂತರ್ಜಲ ಮಟ್ಟ ಸುಧಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಈ ಕ್ರಮಗಳಿಂದ ಯಾವ ಯಾವ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಹೌದು

ಇ) ನಗರ ಪ್ರದೇಶಗಳು ಕಟ್ಟಡ ಮತ್ತು ರಸ್ತೆಗಳಿಂದ ಕೂಡಿದ್ದು ಈ ಪ್ರದೇಶಗಳಲ್ಲಿ ಮಳೆ ನೀರಿನ ಅಂತರ್ಜಲಕ್ಕೆ ಇರುವ ಪ್ರಮಾಣ ಕಡಿಮೆಯಿದ್ದು ಹಾಗೂ ಬಳಕೆ ಜಾಸ್ತಿ ಇರುವುದರಿಂದ ಅಂತರ್ಜಲ ಮಟ್ಟವನ್ನು ಸುಧಾರಿಸಲು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಉಳಿಸಿಕೊಳ್ಳಲು ಕ್ರಮ ಕೈಗೊಂಡಿರುತ್ತದೆ ಹಾಗೂ ಕಟ್ಟಡಗಳ ಚಾವಣಿಗಳ ಮೇಲೆ ಬೀಳುವ ನೀರನ್ನು ಸಂಗ್ರಹಿಸಿ ಉಪಯೋಗಿಸಲು ಮತ್ತು ಕೊಳಚೆ ನೀರನ್ನು ಶುದ್ದೀಕರಿಸಿ ತೋಟಗಾರಿಕೆ ಹಾಗೂ ಇನ್ನಿತರೆ ಉಪಯೋಗಕ್ಕೆ ಬಳಸಲು ಕ್ರಮ ಕೈಗೊಂಡಿರುತ್ತದೆ

ಈ ನಗರ ಪ್ರದೇಶಗಳಲ್ಲಿ ಅಂತರ್ಜಲ ಮರುಪೂರ್ಯೆಕೆ ರಚನೆಗಳ ವಿವಿಧ ಕಾರ್ಯಕ್ರಮಗಳನ್ನು ಕೆಲವು ವರ್ಷಗಳಿಂದ ಪ್ರಾರಂಭಿಸಿದ್ದು ಇದರಿಂದ ಅಂತರ್ಜಲ ಮಟ್ಟವು ಈ ಕೆಳಕಂಡ ಸ್ಥಳಗಳಲ್ಲಿ ಹೆಚ್ಚಳವಾಗಿರುತ್ತದೆ,

1) ಗುರ್ಮಿಟ್‌ಕಲ್ 2) ಶ್ರೀನಿವಾಸಪುರ 3) ಎನ್ ಆರ್ ಪುರ 4) ಕೊಟ್ಟೂರು 5) ಆನೇಕಲ್ 6) ಶಿಡ್ಲಘಟ್ಟ 7) ಚಳ್ಳಕೆರೆ 8) ಮಾಲೂರು 9)ಮುಳಬಾಗಿಲು 10) ಹುಮ್ನಾಬಾದ್